ಭತ್ಯೆಗಳನ್ನು ನೀಡುವ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ. ಈ ಬಗ್ಗೆ ಈಗಾಗಲೇ ಸುಪ್ರೀಂ ಕೋರ್ಟ್ ಅವರ ಪರವಾಗಿ ತೀರ್ಪು ಕೊಟ್ಟಿದ್ದಾರೆ. ಆದರೂ ಸಹ ಇದುವರೆವಿಗೂ ಅವರಿಗೆ ವೇತನ ಸರಿಯಾಗಿ ಕೊಡುತ್ತಿಲ್ಲ. ಅವರನ್ನು ಖಾಯಂ ಮಾಡಿಲ್ಲ. ಆದ್ದರಿಂದ ಸನ್ಮಾನ್ಯ ಸಚಿವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅಲ್ಲಿ ಸುಮಾರು ೧೦-೧೫ ವರ್ಷಗಳಿಂದ ಯಾರ್ಯಾರು ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದಾರೋ ಅಂಥವರನ್ನು ಕೂಡಲೇ ಖಾಯಂ ಮಾಡಿಕೊಳ್ಳಬೇಕು. ಆದಷ್ಟು ಬೇಗ ಈ ಕೆಲಸ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಮತ್ತೊಮ್ಮೆ ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ರಾಜುಗೌಡ.—ಸನ್ಮಾನ್ಯ ಅಧ್ಯಕ್ಷರೇ ನಾನು ಮಾನ್ಯ ಮಂತ್ರಿಗಳಲ್ಲಿ ಒಂದೇ ಒಂದು ಸಮಜಾಯಿಷಿಯನ್ನು ಮಾತ್ರ ಕೇಳುತ್ತೇನೆ. ದಿನಗೂಲಿ ನೌಕರರ ಪರವಾಗಿ ಸುಪ್ರೀಮ್ ಕೋರ್ಟ್ ತೀರ್ಪು ಕೊಟ್ಟರು ಸಹ ಅವರ ಸಮಸ್ಯೆ ಇನ್ನು ಪರಿಗಣಿಸಿಲ್ಲ. ಸುಪ್ರೀಂ ಕೋರ್ಟ್ ಭಾರತ ರಾಜ್ಯಾಂಗದ ೧೪ನೇ ಸೆಕ್ಷನ್ ಪ್ರಕಾರ ಸಮಾನ ಕೆಲಸಕ್ಕೆ ಸಮಾನ ವೇತನವೆಂದು ತೀರ್ಪು ಕೊಟ್ಟಿದ್ದರೂ ಸಹ ಇದುವರೆವಿಗೂ ಅವರ ಕೆಲಸ ಖಾಯಂ ಆಗಿಲ್ಲ. ಅವರಿಗೆ ಸರಿಯಾದ ಸಂಬಳ ಶ್ರೇಣಿ ಸಿಕ್ಕಿಲ್ಲ. ಸುಪ್ರೀಂ ಕೋರ್ಟಿನ ತೀರ್ಪು ಬೆಂಗಳೂರು ಮಹಾನಗರಪಾಲಿಕೆಗೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ, ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ಮತ್ತು ಎಲ್ಲಾ ಸ್ಥಳೀಯ ಸಂಸ್ಥೆಗಳಿಗೂ ಅನ್ವಯವಾಗುತ್ತದೆ. ಆದರೂ ಸಹ ಸರ್ಕಾರ ಇದುವರೆವಿಗೂ ದಿನಗೂಲಿ ನೌಕರರ ಕೆಲಸವನ್ನು ಖಾಯಂ ಮಾಡಿಲ್ಲ. ಈ ಸಂಸ್ಥೆಗಳ ಸಂಪನ್ಮೂಲದ ಬಗ್ಗೆ ಪರಿಶೀಲನೆ ಮಾಡಲು ಒಂದು ಉಪ ಸಮಿತಿಯನ್ನು ನೇಮಕ ಮಾಡಿ ಅವರ ಶಿಫಾರಸ್ಸಿನಲ್ಲಿ ಈ ಸಂಸ್ಥೆಗಳಲ್ಲಿ ಸಂಪನ್ಮೂಲಗಳು ಇದ್ದರೆ ಅವರಿಗೆ ವೇತನ ಕೊಡಬೇಕು ಇಲ್ಲದಿದ್ದರೆ ಇಲ್ಲವೆಂದು ಹೇಳಿದ್ದಾರೆ. ಈ ಬಗ್ಗೆ ಮಾನ್ಯ ಸಚಿವರು ನನಗೆ ಸಮಜಾಯಿಷಿ ಕೊಡಬೇಕು.

ಶ್ರೀ ಎ. ಎಂ. ಚಿಕ್ಕಬೋರಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ಸರ್ಕಾರ ಒಂದು ನೋಟಿಫಿಕೇಷನ್ ಹೊರಡಿಸಿದೆ. ಸಂಪನ್ಮೂಲದ ಜೊತೆಗೆ ವಿಚಾರ ಮಾಡಬೇಕಾದ್ದು ಏನೆಂದರೆ, ಅಲ್ಲಿ ಸ್ಥಾನಗಳು ಖಾಲಿ ಇದೆಯೇ? ಜಾಗ ಭರ್ತಿ ಮಾಡಲಿಕ್ಕೆ ಅವಕಾಶ ಇದೆಯೇ? ಅದಕ್ಕೆ ಸರ್ಕಾರದ ಅನುಮತಿಯಿದೊರೆತಿದೆಯೇ? ಒಂದು ವೇಳೆ ಸರ್ಕಾರದ ಅನುಮತಿ ದೊರೆತಿದ್ದ ಪಕ್ಷದಲ್ಲಿ, ಸರ್ಕಾರದ ರೂಲ್ಸ್ ಪ್ರಕಾರ ಅವರನ್ನು ನೇಮಿಸಿಕೊಂಡಿದ್ದಾರೆಯೇ ? ಈ ಮೂರು ಶರತ್‌ಗಳನ್ನು ಅನುಸರಿಸಿದ್ದರೆ ಖಾಯಮ್ ಮಾಡಬಹುದೆಂದು ಸುಪ್ರೀಮ್‌ಕೋರ್ಟ್ ನಿರ್ದೇಶನ ಕೊಟ್ಟಿದೆಯೇ? ಈ ಮೂರು ಶರತ್ತುಗಳನ್ನು ಅನುಸರಿಸುವುದು ಸ್ವಲ್ಪ ಕಷ್ಟವೇ ಆಗುತ್ತದೆ. ಈ ೩ ಶರತ್ತುಗಳನ್ನು ಹೊಂದಿಸಿಕೊಂಡು, ನಂತರ ಅವರಿಗೆ ಸೌಲಭ್ಯ ಕೊಡಬಹುದೆಂದು ನಾನು ಭಾವಿಸುತ್ತೇನೆ. ಆದ್ದರಿಂದ ಮಾನ್ಯ ಸಚಿವರು ಇದರ ಬಗ್ಗೆ ವಿವರಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳ ಅಭಿಪ್ರಾಯವನ್ನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ಸುಪ್ರೀಮ್ ಕೋರ್ಟಿನ ಆದೇಶದಂತೆ ನಡೆದುಕೊಳ್ಳಬೇಕಾದ್ದು ನಮ್ಮೆಲ್ಲರ ಕರ್ತವ್ಯ. ಆ ಆದೇಶವನ್ನು ಕಡೆಗಣಿಸತಕ್ಕ ಇಚ್ಛೆ ನಮಗಿಲ್ಲ, ಸರ್ಕಾರಕ್ಕೂ ಇಲ್ಲ. ಸಮಾನ ಕೆಲಸ ಮಾಡುವವರಿಗೆ ಸಮಾನ ವೇತನ ಕೊಡಬೇಕೆಂದು ನನ್ನ ಉತ್ತರದಲ್ಲೇ ನಾನು ಹೇಳಿದ್ದೇನೆ. ಇದನ್ನು ಮಾಡುವಾಗ ಹಣದ ಪರಿಸ್ಥಿತಿಯನ್ನೂ ನೋಡಿಕೊಂಡು ಮಾಡಬೇಕೆನ್ನುವ ಮಾತನ್ನೂ ಹೇಳಿದ್ದೇನೆ ದಿನಾಂಕ, ೧-೧-೮೭ರಿಂದ ವೇತನ ಶ್ರೇಣಿಯನ್ನು ಕೊಡಲಾಗುವುದೆಂದು ನಗರ ನೀರು ಸರಬರಾಜು ಮಂಡಳಿಯು ಕೊಡುತ್ತದೆ ಎನ್ನುತಕ್ಕ ಮಾತನ್ನೂ ಹೇಳಿದ್ದೇನೆ. ಇಷ್ಟನ್ನು ಬಿಟ್ಟು ಜಾಸ್ತಿ ಹೇಳಿದರೆ ತಪ್ಪಾಗುತ್ತದೆಂದು ನನಗನಿಸುತ್ತದೆ. ಸಹಾನುಭೂತಿಯಿಂದ ಪರಿಶೀಲನೆ ಮಾಡಿ ಅವರ ಬೇಡಿಕೆಗಳನ್ನು ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ.

೨) ಬೆಂಗಳೂರು ಕಾರ್ಪೋರೇಷನ್‌ವರು ಆಸ್ತಿ ತೆರಿಗೆಜಾಸ್ತಿ ಮಾಡಿರುವ ಬಗ್ಗೆ

ಅಧ್ಯಕ್ಷರು.—ಈಗ ಯಡಿಯೂರಪ್ಪನವರು ಹಾಗೂ ವೆಂಕಟರಾಮಯ್ಯನವರ ಕಾಲಿಂಗ್ ಅಟೆನ್‌ಷನ್.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ತೆರಿಗೆ ಪರಿಷ್ಕರಣದ ಬಗ್ಗೆ ಮಾನ್ಯ ಕಾಪೂರಿನ ಮತ್ತು ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ವೆಂಕಟರಾವಯ್ಯ.—ಮಾನ್ಯ ಅಧ್ಯಕ್ಷರೇ, ನಾನು ಸಹ ಇದೇ ವಿಷಯಕ್ಕೆ ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ''ಬೆಂಗಳೂರು ನಗರದ ಕಾರ್ಪೋರೇಷನ್ ನವರು ಬೆಂಗಳೂರು ನಗರದ ತೆರಿಗೆದಾರರಿಗೆ ಅಪಾರ ಆಸ್ತಿಗಳ ಮೌಲ್ಯ(ಮನೆ ಸೈಟಿನ ಮೌಲ್ಯ) ಹೆಚ್ಚಿನ ತೆರಿಗೆ ಹಾಕುವ ದೃಷ್ಟಿಯಿಂದ ಪರಿಷ್ಕರಣ ಮಾಡಿದ್ದು ಸುಮಾರು ೨೮ ಸಾವಿರ ಜನ ಈ ತೆರಿಗೆ ಪರಿಷ್ಕರಣ ಮಾಡಿರುವ ವಿರುದ್ಧ ಸಂಬಂಧ ಪಟ್ಟ ಅಧಿಕಾರಿಗಳಿಗೆ 'ಅಫೀಲ್' ಹಾಕಿದ್ದು ಈ ಬಗ್ಗೆ ನಗರ ಕಾರ್ಪೋರೇಷನ್ ಸಭೆಯಲ್ಲಿ ಈ ಪರಿಷ್ಕರಣದಲ್ಲಿ ಆಗಿರುವ ಅನ್ಯಾಯದ ವಿರುದ್ಧ ಒಂದು ಸಮಿತಿ ರಚಿಸಿದ್ದು ಆ ಸಮಿತಿಯ ವರದಿಯನ್ನು ಪರಿಶೀಲಿಸದೆ ಇದರಿಂದ ಬ್ರಷ್ಟಾಚಾರಕ್ಕೆ ಅವಕಾಶವಾಗಿದ್ದು ನಗರತೆರಿಗೆದಾರರು ಮುಖ್ಯಮಂತ್ರಿಗಳಿಗೆ ಮತ್ತು ನಗರಾಭಿವೃದ್ಧಿ ಸಚಿವರಿಗೂ ಸಾವಿರಾರು ಮನವಿಗಳನ್ನು ಕೊಟ್ಟಿದ್ದಾರೆ. ಈ ಪರಿಷ್ಕರಣ ವೈಜ್ಞಾನಿಕ ಸಿದ್ಧಾಂತದ ಮೇಲೆ ಆಗದೆ ಆ ವೈಜ್ಞಾನಿಕವಾಗಿದ್ದು ವೈಜ್ಞಾನಿಕ ಆಧಾರದ ಮೇಲೆ ಆಗಬೇಕೆಂದು ಬಿ ಜೆ ಪಿ ಕಾರ್ಪೋರೇಷನ್ ಸದಸ್ಯರು ಕಳೆದ ಮೂರು ದಿವಸದಿಂದ ಮೇಯೋಹಾಲ್ ಮುಂದೆ ಧರಣಿ ಸತ್ಯಾಗ್ರಹ ನಡೆಸುತ್ತಿರುವುದರಿಂದ ಈ ಬಗ್ಗೆ ಸರಕಾರದ ಹೇಳಿಕೆ ಬಯಸುತ್ತೇನೆ.''

ಶ್ರೀ ವಿ.ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—

೧೯೭೬ನೇ ಇಸವಿಯ ಕರ್ನಾಟಕ ಮಹಾನಗರಪಾಲಿಕೆಯು ಅಧಿನಿಯಮವು ಎಲ್ಲಾ ಮಹಾನಗರ ಪಾಲಿಕೆಗಳ ಕಾರ್ಯಕಲಾಪಗಳನ್ನು ನಿಯಂತ್ರಿಸುತ್ತದೆ ಮತ್ತು ಈ ಕಾಯಿದೆಯು ೧-೬-೧೯೭೭ರಿಂದ ಜಾರಿಗೆ ಬಂದಿರುತ್ತದೆ. ೧-೬-೭೭ರ ಮೊದಲು ಬೆಂಗಳೂರು ಮಹಾನಗರಪಾಲಿಕೆಯು ಅದರದೇ ಆದ ''ಬೆಂಗಳೂರು ಮಹಾನಗರಪಾಲಿಕೆ ಅಧಿನಿಯಮ, ೧೯೪೯''ರ ಮೇರೆಗೆ ಪ್ರವರ್ತಿಸುತ್ತಿತ್ತು. ೧-೬-೧೯೭೭ರ ಮೊದಲು ಬೆಂಗಳೂರು ಮಹಾನಗರಪಾಲಿಕೆಯು ಆಸ್ತಿ ತೆರಿಗೆಯನ್ನು ಆಸ್ತಿಯ ವಾರ್ಷಿಕ ಆಧಾಯದ ಮೇಲೆ ಶೇಕಡ ೧೫ರಂತೆ ವಿಧಿಸಲಾಗುತ್ತಿತ್ತು. ಪಾಸದ ಮನೆಗಳಿಗೆ ಅದೇ ದರದಲ್ಲಿ ಈಗಲೂ ಸಹ ತೆರಿಗೆಯನ್ನು ವಿಧಿಸಲಾಗುತ್ತಿದೆ.

೧೯೭೬ನೇ ಇಸವಿಯ ಕರ್ನಾಟಕ ಮಹಾನಗರಪಾಲಿಕೆಗಳ ಅಧಿನಿಯಮದ ೧೦೮(೨)ನೇ ಪ್ರಕರಣದ ಪ್ರಕಾರ ಈ ತೆರಿಗೆಯ ಕನಿಷ್ಠ ದರ ವಾರ್ಷಿಕ ಮೌಲ್ಯದ ಶೇಕಡ ೨೦ ರಷ್ಟು ಮತ್ತು ಗರಿಷ್ಠ ದರ ಶೇಕಡ ೨೫ ರಷ್ಟು ಎಂದು ವಿಧಿಸಲಾಗಿದೆ. ಪ್ರಸ್ತುತ ಈ ದರವನ್ನು ಶೇಕಡ ೧೫ ರಿಂದ ೨೦ಕ್ಕೆ ಹೆಚ್ಚಿಸಲು ಮಹಾನಗರಪಾಲಿಕೆಯಲ್ಲಾಗಲಿ ಅಥವಾ ಸರ್ಕಾರದಲ್ಲಾಗಲಿ ಯಾವ ಪ್ರಸ್ತಾವನೆಯು ಇರುವುದಿಲ್ಲ. ಈಗ ಸಾರ್ವಜನಿಕರಲ್ಲಿ ಕೆಲವರು ಮಾಡುತ್ತಿರುವ ವಿರೋಧವು ವಾರ್ಷಿಕ ಆಸ್ತಿಯ ಮೌಲ್ಯ ನಿರ್ಧಾರದ ಬಗ್ಗೆಯಾಗಿದ್ದು, ಇದು ಪ್ರಸ್ತುತ ಇರುವ ತೆರಿಗೆಯ ದರದ ಬಗ್ಗೆ ಆಗಿರುವುದಿಲ್ಲ.

೨. ಆಸ್ತಿ ಮೌಲ್ಯವನ್ನು ಹೇಗೆ ನಿರ್ಧರಿಸಬೇಕೆಂಬುದರ ಬಗ್ಗೆ ಅಧಿನಿಯಮದ ೧೧೯ನೇ ವಿಧಿಯಲ್ಲಿ ವಿವರಿಸಲಾಗಿದೆ. ಈ ಅಧಿನಿಯಮದಲ್ಲಿ ವಾರ್ಷಿಕ ಆಸ್ತಿ ಮೌಲ್ಯವನ್ನು ನಿರ್ಧರಿಸಲು ಸಂಬಂಧಪಟ್ಟ ಕಟ್ಟಡ ಅಥವಾ ಬೈಲು ಜಾಗದ ವಾರ್ಷಿಕ ಅಥವಾ ಮಾಹಿಯಾನ ಬಾಡಿಗೆಯನ್ನು ಆಧಾರವಾಗಿ ಇಟ್ಟುಕೊಳ್ಳಲಾಗಿದೆ. ಮುಖ್ಯವಾಗಿ ಕಟ್ಟಡ ಅಥವಾ ಜಾಗವನ್ನು ನ್ಯಾಯವಾದ ರೀತಿಯಲ್ಲಿ ಬಾಡಿಗೆಗೆ ಕೊಟ್ಟರೆ ಬರಬಹುದಾದ ಬಾಡಿಗೆಯೇ ಆಧಾರವಾಗಿರುತ್ತದೆ.

೩. ಈ ಕಾಯಿದೆಯ ಷೆಡ್ಯೂಲ್ ೩ ರಲ್ಲಿ ಇರುವ ''ತೆರಿಗೆ ನಿಯಮಾವಳಿ'' ಯಲ್ಲಿ ತೆರಿಗೆ ವಸೂಲಿಗೆ ಸಂಬಂಧಪಟ್ಟ ನಿಯಮಗಳನ್ನು ಅಳವಡಿಸಲಾಗಿದೆ. ಈ ನಿಯಮಾವಳಿಯ ೫ನೇ ನಿಯಮದ ಕೆಳಗೆ ತೆರಿಗೆಯನ್ನು ೫ವರ್ಷಕ್ಕೆ ಒಮ್ಮೆ ಪರಿಷ್ಕರಿಸಲು ಮಹಾನಗರಪಾಲಿಕೆಯು ಆಯುಕ್ತರಿಗೆ (ಮಹಾನಗರ ಪಾಲಿಕೆಗೆ ಅಲ್ಲ) ಅಧಿಕಾರವಿದೆ.

ಇದರಿಂದ ತಿಳಿಯುವುದೇನೆಂದರೆ ಆಯುಕ್ತರು ವಾರ್ಷಿಕ ತೆರಿಗೆ ಮೌಲ್ಯ ಪರಿಷ್ಕರಿಸುವುದಕ್ಕೆ ಮುನ್ನ ಮಹಾನಗರಪಾಲಿಕೆಯನ್ನಾಗಲಿ ಅಥವಾ ಬೇರೆ ಯಾರ ಸಲಹೆಯನ್ನು ಅಥವಾ ಒಪ್ಪಿಗೆಯನ್ನು ಪಡೆಯಬೇಕಾಗಿರುವುದಿಲ್ಲ.

ನಿಯಮಾವಳಿ ೬ನೇ ನಿಯಮದ ಪ್ರಕಾರ ಒಮ್ಮೆ ಸರಿ ತೆರಿಗೆ ಮೌಲ್ಯ ಪರಿಷ್ಕರಿಸಿದ ನಂತರ ಪುನಃ ಅದನ್ನು ಪರಿಷ್ಕರಿಸುವವರೆಗೆ ಹಿಂದಿನಂತೆ ಮುಂದುವರಿಯುತ್ತದೆ.

ಒನೇ ನಿಯಮದಲ್ಲಿ ಮೌಲ್ಯ ಪರಿಷ್ಕರಿಸುವಾಗ ಪಾಲಿಸಬೇಕಾದ ಕ್ರಮವನ್ನು ಗೊತ್ತು ಪಡಿಸಲಾಗಿದೆ. ಈ ನಿಯಮಾವಳಿಯ ಪ್ರಕಾರ ಆಯುಕ್ತರು ವಾರ್ಷಿಕ ಮೌಲ್ಯ ಪರಿಷ್ಕರಿಸುವ ಮೊದಲು ಸಾರ್ವತ್ರಿಕ ಸೂಚನೆ ಮತ್ತು ನಂತರ ವಿಶೇಷ ಸೂಚನೆಯನ್ನು ನೀಡಬೇಕಾಗಿರುತ್ತದೆ ವಾರ್ಷಿಕ ಮೌಲ್ಯ ಹೆಚ್ಚಿಸಬೇಕಾದ ಪ್ರಕರಣಗಳಲ್ಲಿ ಎರಡನೇ ಸೂಚನೆಯನ್ನು ಸಂಬಂಧಪಟ್ಟವರಿಗೆ ವೈಯಕ್ತಿಕವಾಗಿ ಕೊಡಬೇಕಾಗುತ್ತದೆ. ೧೧ನೇ ನಿಯಮದ ಪ್ರಕಾರ ತೆರಿಗೆದಾರರು ಮೊಕ್ತ ವಿಚಾರಣೆಯ ಹಕ್ಕು ಹೊಂದಿರುತ್ತಾರೆ. ಈ ನಿಯಮದ ಪ್ರಕಾರ ಪರಿಷ್ಕರಿಸಿದ ತೆರಿಗೆಯು ಸೂಚನೆ ಪ್ರಕಟವಾದ ದಿನಾಂಕದಿಂದ ಮುಂಬರುವ ಅರ್ಧ ವರ್ಷದ ಮೊದಲನೇ ದಿನದಿಂದ ಜಾರಿಗೆ ಬರಬೇಕಾಗಿರುತ್ತದೆ.

೪. ತೆರಿಗೆದಾರರು ಆಯುಕ್ತರಿಗೆ ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿಗೆ ಈ ವಿಷಯದಲ್ಲಿ ಪುನರ್ ಪರಿಶೀಲಿಸಲು ಮನವಿಯನ್ನು ಸಲ್ಲಿಸುವ ಅಧಿಕಾರವನ್ನು ಪಡೆದಿರುತ್ತಾರೆ. ಈ ರೀತಿಯ ಮನವಿಯನ್ನು ಆಯುಕ್ತರು ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿ ತೆರಿಗೆದಾರರಿಗೆ ಮೊಕ್ತ ವಿಚಾರಣೆಗೆ ಅವಕಾಶ ಮಾಡಿಕೊಟ್ಟ ನಂತರ ವಿಲೇ ಮಾಡಬೇಕಾಗುತ್ತದೆ (ನಿಯಮ೧೭). ನಿಯಮ ೧೮ರಡಿಯಲ್ಲಿ ೩ ಜನ ಚುನಾಯಿತ ಮಹಾನಗರಪಾಲಿಕೆಯ ಸದಸ್ಯರುಗಳನ್ನುಳ್ಳ ಒಳಗೊಂಡ ತೆರಿಗೆ ಮೇಲ್ಮನವಿ ಸಮಿತಿಗೆ ಪನವಿ ಸಲ್ಲಿಸುವ ಹಕ್ಕು ಇರುತ್ತದೆ. ಮೇಲ್ಮನವಿಯಲ್ಲಿ ತೀರ್ಮಾನ ತೆಗೆದು ಕೊಳ್ಳುವ ಮೊದಲು ತೆರಿಗೆ ಮೇಲ್ಮನವಿ ಸಮಿತಿಯು ಮನವಿದಾರರನ್ನು ಮೊಕ್ತ ವಿಚಾರಣೆ ಮಾಡುತ್ತದೆ.

೫. ಮಹಾನಗರಪಾಲಿಕೆ ಹಿತಕ್ಕೆ ದಕ್ಕೆ ತರುವ ಹಾಗೆ ನಿಗದಿಪಡಿಸಿರುವ ಕಂದಾಯ ಪರಿಷ್ಕರಣ ವೆಂದು ಮನದಟ್ಟಾದಲ್ಲಿ ನಿಯಮ ೧೯ರಲ್ಲಿ ವಿಭಾಗಾಧಿಕಾರಿಗಳಿಗೆ ಆಯುಕ್ತರು ವಾರ್ಷಿಕ ಮೌಲ್ಯ ಪರಿಷ್ಕರಿಸಿ ಮಾಡಿರುವ ಆಜ್ಞೆಯನ್ನು ಅಥವಾ ತೆರಿಗೆ ಮೇಲ್ಮನವಿ ಸಮಿತಿಯು ಆದೇಶವನ್ನು ಸ್ವತಃ ಪರಿಶೀಲಿಸಿ ಪರಿಷ್ಕರಿಸುವ ಅಧಿಕಾರ ದತ್ತವಾಗಿರುತ್ತದೆ. ತೆರಿಗೆ ಮೇಲ್ಮನವಿ ಸಮಿತಿ ಅಥವಾ ಜಿಲ್ಲಾ ನ್ಯಾಯಾಧೀಶರ ಆಜ್ಞೆಗೆ ವಿರುದ್ಧವಾಗಿ ಮೇಲ್ಮನವಿಯನ್ನು ನಿಯಮ ೨೦ರಡಿಯಲ್ಲಿ ಜಿಲ್ಲಾ ನ್ಯಾಯಾಲಯಕ್ಕೆ ಸಲ್ಲಿಸಲು ಅಧಿಕಾರವಿರುತ್ತದೆ.

೬. ಮೇಲ್ಕಂಡ ಟಿಪ್ಪಣಿಯಿಂದ ವಿಷದ ಪಡುವುದೇನೆಂದರೆ ತೆರಿಗೆ ಪರಿಷ್ಕರಿಸುವ ತೆರಿಗೆದಾರರಿಗೆ

i) ಸೂಚನೆ ಮತ್ತು ಮೊತ್ತ ವಿಚಾರಿಸಲ್ಪಡುವ ಅಧಿಕಾರವಿದೆ.

ii) ಪುನರ್ ಪರಿಶೀಲನ ಅರ್ಜಿ ಸಲ್ಲಿಸುವ ಅಧಿಕಾರವಿದೆ.

iii) ತೆರಿಗೆ ಮೇಲ್ಮನವಿ ಸಮಿತಿಗೆ ಮೇಲ್ಮನವಿ ಸಲ್ಲಿಸುವ ಅಧಿಕಾರವಿದೆ. ಮತ್ತು

iv) ಜಿಲ್ಲಾ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸುವ ಅಧಿಕಾರವಿದೆ.

೭. ದಿನಾಂಕ ೧೫-೯-೧೯೮೬ರಂದು ಬೆಂಗಳೂರು ಮಹಾನಗರಪಾಲಿಕೆಯ ಆಯುಕ್ತರು ಸಾಮಾನ್ಯ ವಾರ್ಷಿಕ ಮೌಲ್ಯ ಪರಿಷ್ಕರಣದ ಬಗ್ಗೆ ಸೂಚನೆಯನ್ನು ಪ್ರಕಟಿಸಿದ್ದಾರೆ. ವಿಶೇಷ ಸೂಚನೆಗಳನ್ನು ನಂತರ ಬೇರೆ ಬೇರೆ ದಿನಾಂಕಗಳಲ್ಲಿ ವೈಯಕ್ತಿಕವಾಗಿ ಸಂಬಂಧಪಟ್ಟ ತೆರಿಗೆದಾರರಿಗೆ ಕೊಡಲಾಗಿದೆ. ಈ ವಿಷಯದಲ್ಲಿ ಬೆಂಗಳೂರು ಮಹಾನಗರಪಾಲಿಕೆಯು ಅಧಿಕಾರಿಗಳು ವಾರ್ಷಿಕ ಮೌಲ್ಯ ಪರಿಷ್ಕರಿಸುವ ಬಗ್ಗೆ ಈ ವರಗೆ ಮಾಡಿದ ಕೆಲಸಕಾರ್ಯಗಳು ಇಂತಿವೆ'—

ಆಸ್ತಿಗಳ ಸಂಖ್ಯೆ:	ಸಹಾಯಕ ಕಂದಾಯ ಅಧಿಕಾರಿ ವರದಿ ಮೇಲೆ ಮಾಡಿದ ಆಜ್ಞೆಗಳ ಸಂಖ್ಯೆ.	ಆಸ್ತಿ ವಾರ್ಷಿಕ ಮೌಲ್ಯವನ್ನು ಬದಲಾಯಿಸದೆ ಇರುವ ಪ್ರಕರಣಗಳ ಸಂಖ್ಯೆ.	ವಿಶೇಷ ಸೂಚನೆ ಗಳನ್ನು ಕೊಟ್ಟ ಸಂಖ್ಯೆ.	ತಿರಸ್ಕರಿಸಿದ ಪುನಃ ಪರಿಶೀಲನಾ ಅರ್ಜಿಗಳ ಸಂಖ್ಯೆ.	ಪರಿಷ್ಕರಿಸಿದ ತೆರಿಗೆಯನ್ನು ಪಾವತಿ ಮಾಡಿದ ಪ್ರಕರಣಗಳ ಸಂಖ್ಯೆ.
೧,೯೦,೪೪೩	೧,೮೬,೯೪೪	೩೮,೨೨೨	೧,೪೮,೧೩೧	೨೯,೫೧೦	೧೪,೦೭೮

ತೆರಿಗೆ ಪರಿಷ್ಕರಣವು ಆಧಾರವಿಲ್ಲದ್ದು, ಮನಸ್ಸಿಗೆ ಬಂದಂತೆ ಮಾಡಿರುವುದಾಗಿ ಮತ್ತು ಸೂಕ್ತವಲ್ಲ ವೆಂದು ಅನೇಕ ದೂರುಗಳು ಸರ್ಕಾರಕ್ಕೆ ಬಂದಿವೆ. ಯಾವ ವ್ಯಕ್ತಿಯೇ ಆಗಲಿ ಆಸ್ತಿಯ ವಾರ್ಷಿಕ ಮೌಲ್ಯ

ಭಾಷಣದಲ್ಲಿ ತೋದರೆಯಾಗಿದ್ದಲ್ಲಿ ಮೇಲೆ ತಿಳಿಸಿರುವ ಕಾನೂನು ಪ್ರಕಾರ ಪರಿಹರಿಸಿಕೊಳ್ಳಬಹುದಾಗಿದೆ.

೮. ಈ ತೆರಿಗೆ ಪರಿಷ್ಕರಣದಿಂದಾಗಿ ಮಹಾನಗರಪಾಲಿಕೆಗೆ ಸುಮಾರು ೬ ಕೋಟಿ ರೂಗಳ ಅಧಿಕ ಉತ್ಪನ್ನ ಬರುವುದೆಂದು ನಿರೀಕ್ಷಿಸಲಾಗಿದೆ.

೯. ಈ ಕೆಳಕಂಡ ಕಾರಣಗಳಿಂದಾಗಿ ಮಹಾನಗರಪಾಲಿಕೆಗೆ ಹೆಚ್ಚಿನ ಉತ್ಪತ್ತಿಯು ಅವಶ್ಯಕತೆ ಇರುತ್ತದೆ.—

i) ೧೯೮೭-೮೮ರಿಂದ ಮುಂದಿನ ೪ ವರ್ಷಗಳಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ೩೦.೦೦ ಕೋಟಿ ರೂಗಳನ್ನು ಬೆಂಗಳೂರು ಮಹಾನಗರಪಾಲಿಕೆಯು ಬಡ್ಡಿರಹಿತ ಸಾಲದ ರೂಪದಲ್ಲಿ ಕೊಡಬೇಕಾಗಿರುತ್ತದೆ.

ii) ನಿವೃತ್ತಿ ವಯಸ್ಸನ್ನು ೧೯೮೪ರಲ್ಲಿ ಹೆಚ್ಚಿಸಿದ್ದರಿಂದ ೧೯೮೭-೮೮ನೇ ಸಾಲಿನಲ್ಲಿ ಮಹಾನಗರಪಾಲಿಕೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೌಕರರು ನಿವೃತ್ತರಾಗುವುದರಿಂದ ಅವರಿಗೆ ನಿವೃತ್ತಿ ನಂತರ ಕೊಡಬೇಕಾದ ಸೌಲಭ್ಯ ಗಳಿಗಾಗಿ ಸುಮಾರು ೨.೦೦ಕೋಟಿ ರುಗಳು ಬೇಕಾಗುತ್ತದೆ. ಮತ್ತು

iii) ಸರ್ಕಾರವು ಈಗಾಗಲೇ ೩ನೇ ವೇತನ ಆಯೋಗದ ವರದಿಯನ್ನು ಒಪ್ಪಿದ್ದು ಈ ವೇತನ ಪರಿಷ್ಕರಣದ ಸೌಲಭ್ಯವನ್ನು ಮಹಾನಗರಪಾಲಿಕೆಯ ನೌಕರರಿಗೂ ವಿಸ್ತರಿಸಬೇಕಾಗಿರುವುದರಿಂದ ಸೂಮಾರು ೩.೦೦ ರಿಂದ ೪.೦೦ ಕೋಟಿ ರೂಗಳು ಬೇಕಾಗಿರುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ಪ್ರಸ್ತಾಪ ಮಾಡುವಾಗ ಮಾನ್ಯ ನಗರಾಭಿವೃದ್ಧಿ ಸಚಿವರ ಮನಸ್ಸಿನಲ್ಲಿ ತೆರಿಗೆಯನ್ನು ಏರಿಸಿದ್ದು ತಪ್ಪು ಎನ್ನುವ ತಕ್ಕಂಥ ಭಾವನೆ ಈ ವರದಿಯಲ್ಲಿ ಕಾಣುವುದಿಲ್ಲ. ನಾನು ಈ ವಿಷಯವನ್ನು ಸದನದಲ್ಲಿ ಗಮನ ಸೆಳೆಯುವ ಸೂಚನೆ ಮೂಲಕ ಪ್ರಸ್ತಾಪ ಮಾಡಿದ್ದರ ಉದ್ದೇಶ ಏನೆಂದರೆ, ಈಗ ಏನು ಆಸ್ತಿ ತೆರಿಗೆ ಪರಿಷ್ಕರಣ ಮಾಡಿದ್ದಾರೆ ಅದಕ್ಕೆ ಯಾವುದೆ ವೈಜ್ಞಾನಿಕವಾದ ಆಧಾರವಿಲ್ಲದೇ ಅಲ್ಲಿನ ಅಧಿಕಾರಿಗಳು ತಮ್ಮ ಮನಸ್ಸಿನ ಪ್ರಕಾರ ಮಾಡಿದ್ದಾರೆ ಎಂದು ಹೇಳಬೇಕಾಗುತ್ತದೆ. ಅದಕ್ಕೆ ನೇರವಾಗಿ ಒಂದೆರಡು ಉದಾಹರಣೆ ಕೊಡುವುದಾದರೆ ನಾನು ಕಳೆದೆರಡುಮೂರು ದಿನಗಳ ಬೆಳಿಗ್ಗೆ ಎರಡು ಗಂಟೆ ಸಿಟಿಯಲ್ಲಿ ಓಡಾಡುವುದಕ್ಕೆ ಪ್ರಯತ್ನ ಮಾಡಿದೆ. ಸನ್ಮಾನ್ಯ ಸಚಿವರು ಸದನದ ಒಂದು ಸಮಿತಿ ಮಾಡಲಿ ಅಧಿಕಾರಿಗಳು ಜೊಗ ಹೆಚ್ಚು ತೆರಿಗೆ ಹಾಕಿದ್ದಾರೆ ಎಂಬುದನ್ನು ಆ ಸಮಿತಿ ಮನವರಿಕೆ ಮಾಡಿಕೊಂಡ ಮೇಲೆ ಅದನ್ನು ಮಂತ್ರಿಗಳು ಪುನರ್‌ಪರಿಶೀಲೆ ಮಾಡಲಿ. ೧ ಲಕ್ಷ ೮೭ ಸಾವಿರ ತೆರಿಗೆದಾರರ ಪೈಕಿ ಸುಮಾರು ೪೦ ಸಾವಿರ ಮಂದಿಗೆ ಮನೆ ಮಾಳಿಗೆ ಮಳಿಗೆ ಎಲ್ಲ ಇದ್ದು ಅವರಿಗೆ ಒಂದು ಪೈಸೆ ತೆರಿಗೆ ಜಾಸ್ತಿ ಮಾಡಿಲ್ಲ. ಅವರೆಲ್ಲ ಅಧಿಕಾರಿಗಳಿಗೆ ಕಾಸು ಕೊಟ್ಟು ಸರಿಮಾಡಿಕೊಂಡಿದ್ದಾರೆ. ಅದೇ ರೀತಿ ೨೦ ಸಾವಿರ ಮಂದಿಗೆ ಇಲ್ಲೇಗಲ್ ಆಗಿ ನೋಟೀಸ್ ಕೊಟ್ಟಿದ್ದು ಅವೆಲ್ಲ ಕಾರ್ಪೊರೇಷನ್ನಿಗೇ ವಾಪಸ್ಸು ಬಂದಿವೆ. ಮತ್ತು ೨೦ ಸಾವಿರ ಮಂದಿ ತೆರಿಗೆದಾರರಿಗೆ ಇನ್ನೂ ನೋಟೀಸ್ ಕೊಟ್ಟಿಲ್ಲ. ಮತ್ತು ನನಗೆ ಗೊತ್ತಿರುವ ಪ್ರಕಾರ ಪ್ರಭಾವ ಇರುವ ಅಧಿಕಾರಿಗಳು ರಾಜಕಾರಣಿಗಳು ೧೦೦-೨೦೦ ರೂ ನಾಮಿನಲ್ ಆಗಿ ಜಾಸ್ತಿ ಮಾಡುವಂತೆ ಅಧಿಕಾರಿಗಳೊಂದಿಗೆ ಶಾಮೀಲಾಗಿ ಅವರ ಕೈಬಿಸಿ ಮಾಡಿ ಸರಿಪಡಿಸಿ ಕೊಂಡಿದ್ದಾರೆ. ಬಂದು ಲಕ್ಷ ಜನ ಹೀಗೆ ಸರಿಮಾಡಿಕೊಂಡಿದ್ದಾರೆ. ಉಳಿದ ೮೦ ಸಾವಿರ ತೆರಿಗೆದಾರರಲ್ಲಿ ೨೦ ಸಾವಿರ ಜನ ಅಪೀಲು ಹಾಕಿದ್ದಾರೆ. ಇನ್ನು ಉಳಿದವರು ಕಡುಬಡವರು ವಿದ್ಯೆ ಇಲ್ಲದ ಅಪೀಲು ಹಾಕಲು ಗೊತ್ತಿಲ್ಲದವರು ಅಪೀಲು ಹಾಕಿಲ್ಲ.

ಅಧ್ಯಕ್ಷರು.—ಯಡಿಯೂರಪ್ಪನವರೇ ನೀವು ಭಾಷಣ ಶುರುಮಾಡಿಬಿಟ್ಟರಲ್ಲ ಬರೀ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅದೇ ಹೇಳುತ್ತಿದ್ದೇನೆ ಸ್ವಾಮಿ. ಈಗಾಗಲೇ ನಗರಸಭೆ ಯಲ್ಲಿ ಚೆನ್ನಾಗಿ ಕೆಲಸ ಮಾಡಿರುವ ಅವರ ಪಕ್ಷದವರೇ ಆದ ನಾರಾಯಣಿರಾಯರು ಪತ್ರಿಕಾ ಹೇಳಿಕೆ ಕೊಟ್ಟು ಈ ಪರಿಷ್ಕರಣ ದೋಷಪೂರಿತವಾಗಿನೆಯೆಂದೂ, ಅದನ್ನು ಮಾಪಸ್ ಪಡೆಯಲಾಗುವುದೆಂದೂ ಹೇಳಿದ್ದಾರೆ. ಅವರು ಪಕ್ಷದ ಹಿರಿಯರಾದ ಶ್ರೀ ತಾವರಗೆರೆ ಸಂಸತ್ ಸದಸ್ಯ ಶ್ರೀ ಕೃಷ್ಣಅಯ್ಯರ್ ಅವರು ಸಹ ತಪ್ಪು ಎಂದು ಹೇಳಿದ್ದಾರೆ. ಇವರ ಪರಿಷ್ಕರಣೆ ಹೇಗೆ ದೋಷಪೂರಿತವಾಗಿದೆ ಎಂದು ಬಗ್ಗೆ ನನಗೆ ಪತ್ರವೊಂದು ಬಂದಿದೆ. ಪಿ. ಎನ್. ನಾರಾಯಣ ಎಂಬುವರು ೧೫ ರೂ ಕೊಡುತ್ತಿದ್ದರು, ಅವರಿಗೆ ಈಗ ೨೩೫ ರೂ. ಹಾಕಿದ್ದಾರೆ.

ಅಧ್ಯಕ್ಷರು.—ನಿಮ್ಮ ಹೆತ್ತಿರ ಪಿಟಿಷನ್‌ಗಳಿದ್ದರೆ ಅವನ್ನು ಪಿಟಿಷನ್ ಕಮಿಟಿಗೆ ಕೊಡಿ. ಇಲ್ಲೇಕೆ ಹೇಳುತ್ತೀರಿ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಪಟ್ಟಿ ನೋಡಿ ಸ್ವಾಮಿ. ತಿಳಿಗಿ ರೂ. ತೆರಿಗೆ ಮೊದಲು ಕೊಡುತ್ತಿದ್ದ ಒಬ್ಬರಿಗೆ ೨,೦೯೬ ರೂ ಹಾಕಿದ್ದಾರೆ. ೧೩೬ ಇದ್ದದ್ದು ೧೯೬೩ರೂ ಹಾಕಿದ್ದಾರೆ. ಅಬ್ದುಲ್ ಖಾನ್ ಎಂಬುವರು ೧೩೭ ಕೊಡುತ್ತಿದ್ದು ೧೮೨೧ ರೂ. ಹಾಕಿದ್ದಾರೆ. ಈ ವಿವರ ಕೊಡುತ್ತಿರುವ ಉದ್ದೇಶವೇನೆಂದರೆ ಯಾವುದೇ ವೈಜ್ಞಾನಿಕ ಆಧಾರ ಇಲ್ಲದೆ ಮನಸ್ಸೋ ಇಚ್ಛೆ ಇವರು ತೆರಿಗೆ ಹಾಕಿದ್ದಾರೆ. ಬೆಂಗಳೂರಿನ ಬಡ ತೆರಿಗೆದಾರರಿಗೆ ಇದರಿಂದ ಅನ್ಯಾಯವಾಗಿದ್ದು ದುಡ್ಡಿದ್ದವರು ಮತ್ತು ಇನ್‌ಫ್ಲೂಯೆನ್ಸ್ ಇದ್ದವರು ಉಳಿದುಕೊಂಡಿದ್ದಾರೆ.

ಅಧ್ಯಕ್ಷರು.—ಕ್ಲಾರಿಫಿಕೇಷನ್ ಕೇಳಿ ಎಂದು ನಾನು ಹೇಳಿದೆ ಆಗಲ್ಲೇ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಲಕ್ಷಾಂತರ ಜನರಿಗೆ ಅನ್ಯಾಯವಾಗಿರುವಾಗ ಈ ಸದನದಲ್ಲಿ ನಾವು ಸುಮ್ಮನೆ ಕೂತಿರುವುದಾದರೂ ಹೇಗೆ ? ಮಾತನಾಡಿ ಮಂತ್ರಿಗಳ ಮನಸ್ಸನ್ನು ಒಲಿಸಿಕೊಳ್ಳುವ ಪ್ರಯತ್ನದಲ್ಲಿ ತಾವು ಸಹಕರಿಸಬೇಕು. ದಯವಿಟ್ಟು ತಾವು ರಿಯಾಯಿತಿ ತೋರಬೇಕು.

ಮಾನ್ಯ ಅಧ್ಯಕ್ಷರು.—ನೋಡಿ ರೂಲ್ ಏನಿದೆ ಎಂದರೆ.

> "There shall be no debate on such statement at the time it is made but each member in whose name the item stands in the list of business may, with the permission of the Speaker ask a question",

ಅಂದರೆ ಕ್ವೆಶ್ಚನ್ ಎಂದರೆ ಏನು, ಸ್ಪೀಕರ್ ಎಂದರೆ ಏನು ವಿಂದಂ ಗೊತ್ತಿದೆಯಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಲಕ್ಷಾಂತರ ಜನರಿಗೆ ತೊಂದರೆಯಾಗಿರುವುದರಿಂದ ತಮ್ಮ ಡಿಸ್ಕ್ರಿಷನರಿ ಪವರ್ ಬಳಸಿ ಅವಕಾಶ ಕೊಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ.....

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ರೆಕಾರ್ಡ್ ಮಾಡಬೇಡಿ ಎಂದು ಹೇಳಬೇಕಾಗುತ್ತದೆ. ಮಾನ್ಯ ವೆಂಕಟರಾಮಯ್ಯನವರೇ ತಾವು ಮಾತನಾಡಿ.

ಶ್ರೀ ಆರ್. ವೆಂಕಟರಾಮಯ್ಯ.—ತೆರಿಗೆ ಪರಿಷ್ಕರಣದ ಬಗ್ಗೆ ಈಗಾಗಲೇ ಮಂತ್ರಿಗಳು.....

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಒಂದು ಮಾತನ್ನು ಹೇಳುವುದೇನೆಂದರೆ.....

ಅಧ್ಯಕ್ಷರು.—ತಾವು ಕೂಡ್ರಿ ನೀವು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಅವರು ಕೇಳಲಿ ಆಮೇಲೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ಯಾರು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ನಾರಾಯಣ ಕುಮಾರ್‌ರವರೆ ತಾವು ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.—ನನ್ನದು ಒಂದು ಪಾಯಿಂಟ್ ಆಫ್ ಆರ್ಡರ್ ಇದೆ ನಿಯಮದಲ್ಲಿ.....

(ಗೊಂದಲ)

ಅಧ್ಯಕ್ಷರು.—ಪುಸ್ತಕ ನನ್ನ ಹೆತ್ತಿರ ಇದೆ ತಾವು ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್. —ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ ತಾವು ಕೇಳಲೇಬೇಕು

(Interruption) Why don't you allow me to raise a point of order ?

ಉತ್ತರ ಕೊಡುವುದಕ್ಕೆ ಮಂತ್ರಿಗಳಿದ್ದಾರೆ, ಪ್ರಶ್ನೆ ಕೇಳುವುದಕ್ಕೆ ಇವರು ಇದ್ದಾರೆ. ಅವರು ಮಧ್ಯೆ ಎದ್ದು ನಿಂತು ಸಿಕ್ಕಾಪಟ್ಟೆ ಮಾತನಾಡಿದರೆ ಹೇಗೆ? ನೀವು ಅವರನ್ನು ಕಂಟ್ರೋಲ್ ಮಾಡಿ.

(ಗೊಂದಲ)

ಅಧ್ಯಕ್ಷರು. —ರೆಕಾರ್ಡ್ ಮಾಡಬಾರದೆಂದು ಹೇಳಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ. —ಇದು ಬಹಳ ಗಂಭೀರವಾದಂತಹ ಸಮಸ್ಯೆ. ಮಾನ್ಯ ಮಂತ್ರಿಗಳ ಪ್ರಕಾರ ಆಸ್ತಿಕ ಆದಾಯದ ಮೇಲೆ ಶೇಕಡ ೧೫ ರಂತೆ ಗರಿಷ್ಟ ೨೫ ರಂತೆ, ೧೫ ರಿಂದ ೨೦ ಕ್ಕೆ ಏರಿಸಬೇಕೆಂದು ಹೇಳಿದ್ದಾರೆ, ಇದೆ. ಮಾನ್ಯ ಯಡಿಯೂರಪ್ಪನವರು ಹೇಳಿದರು ೪೦೦ ರೂಪಾಯಿ ಇರುವುದನ್ನು ೪೮೦೦ ಮಾಡಿದ್ದಾರೆ ೧೨೦ ರೂಪಾಯಿ ಇರುವುದನ್ನು ೫೦೦ ರೂಪಾಯಿಗಳೆಂದು ಮಾಡಿದ್ದಾರೆ ಎಂದು ಸ್ಪೆಸಿಫಿಕ್ instance ಕೊಟ್ಟಿದ್ದಾರೆ. ಇದರಿಂದಾಗಿ ೧,೮೬,೯೦೪ ಜನರಿಗೆ ತೊಂದರೆಯಾಗುತ್ತದೆ ಅವರ ಪ್ರಕಾರ ಇದರಿಂದ ಬರುವ ಲಾಭ ೬ ಕೋಟಿ ರೂಪಾಯಿ ಅವರ ಪ್ರಕಾರ ಇದರಿಂದ ೪೦-೫೦ ಕೋಟಿ ರೂಪಾಯಿ ಬರುತ್ತದೆಂದು ನನ್ನ ಕೆಲವು ಸ್ನೇಹಿತರು ಹೇಳಿದರು. ಅವರು ಹೇಳಿರುವುದು ಸುಳ್ಳು ಕಾವೇರಿ ಮೂರನೇ ಹಂತವನ್ನು ಕಮೆನ್ಸ್ ಮಾಡಲು ೫೦ ಕೋಟಿ ರೂಪಾಯಿ ಬೇಕು, ನಿವೃತ್ತಿವೇತನಕ್ಕೆ ೨ ಕೋಟಿ ಇನ್ನೊಂದಕ್ಕೆ ೩ ಕೋಟಿ ಬೇಕೆಂದು ಹೇಳಿದರು. ನಿಮ್ಮ ಪಕ್ಷದ ಎಲ್ಲಾ ನಾಯಕರು, ನಾರಾಯಣ ಕುಮಾರ್‌ರವರನ್ನು ಬಿಡಿ ನಾವು ಅವರನ್ನು ಲೆಕ್ಕಕ್ಕೆ ಇಟ್ಟಿಲ್ಲ.

ಶ್ರೀ ಜಿ. ನಾರಾಯಣ ಕುಮಾರ್. —ಮಾನ್ಯ ಅಧ್ಯಕ್ಷರೇ ಬೆಂಗಳೂರು ನಾಗರೀಕರ ಬಗ್ಗೆ ಅವರಿಗೆ ಏನೂ ಕಳಕಳಿ ಇಲ್ಲ.

(ಗೊಂದಲ)

ಶ್ರೀ ಮಲ್ಲಪ್ಪ. —ಶ್ರೀ ನಾರಾಯಣ ಕುಮಾರ್‌ರವರನ್ನು ಲೆಕ್ಕಕ್ಕೆ ಇಟ್ಟುಕೊಂಡಿಲ್ಲವೆಂದರೆ ಏನು.....

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ. —ತೆರಿಗೆ ಬಗ್ಗೆ ಶ್ರೀ ನಾರಾಯಣ ರಾವ್‌ರವರು ಹೇಳಿದ್ದಾರೆ, ಶ್ರೀ ಕೃಷ್ಣ ಅಯ್ಯರ್‌ರವರೂ ಕೂಡ ಹೇಳಿದ್ದಾರೆ.

ಶ್ರೀ ಜಿ. ನಾರಾಯಣಕುಮಾರ್. —ಇವರು ಕನ್ನಡಿಗರ ವಿರೋಧಿ ನೀತಿಯನ್ನು ಅನುಸರಿಸಿದ್ದಾರೆ. ಕಮ್ಯೂನಿಸ್ಟರು ದೇಶದ್ರೋಹಿಗಳು.

ಅಧ್ಯಕ್ಷರು. —ನೀವು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಜಿ. ನಾರಾಯಣಕುಮಾರ್. —ಇದು ಬೆಂಗಳೂರು ನಗರ ಕನ್ನಡಿಗರ ರಾಜಧಾನಿ.

(ಗೊಂದಲ)

ಅಧ್ಯಕ್ಷರು. —ಈಗ ಯಾರು ಏನು ಮಾತನಾಡಿದರೂ ರೆಕಾರ್ಡಿಗೆ ಹೋಗುವುದಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್. —ಸ್ವಾಮಿ, ನಾನು ಕ್ರಿಯಾಲೋಪವನ್ನು ಎತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು. —ಅವರು ಏನು ಹೇಳಿದ್ದಾರೆ, ಅವನ್ನು ಎಕ್ಸ್‌ಪಂಜ್ ಮಾಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. —ರೂಲ್ ೩೨೭ರ ಪ್ರಕಾರ

"Whilst the House is sitting, a member shall not interrupt any member while speaking by disorderly expression or noises or in any other disorderly manner."

ಆದರಿಂದ ಈ ರೂಲ್ ಪ್ರಕಾರ ಶ್ರೀಮಾನ್ ನಾರಾಯಣಕುಮಾರ್‌ಗೆ ಅಧಿಕಾರ ಇಲ್ಲ, ಈ ರೀತಿ ಮಧ್ಯದಲ್ಲಿ ಮಾತನಾಡತಕ್ಕಂಥದ್ದು ಸರಿಯಿಲ್ಲ. ಅದಕ್ಕೆ ತಾವು ಅವರಿಗೆ ಹೇಳಿಬಿಡಿ. ಇಲ್ಲದೇ ಹೋದರೆ ಈ ಕಡೆಯಿಂದ ನೂರಾರು ಜನ ಹೇಳಬೇಕಾಗುತ್ತದೆ.

ಶ್ರೀ ಜಿ. ನಾರಾಯಣಕುಮಾರ್.—ಹೆದರಿಸುತ್ತೀರಲ್ಲಾ ನೀವು.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ನಾನು ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಜನತಾ ಪಾರ್ಟಿ ನಾಯಕರಲ್ಲಿ ಇದಕ್ಕೆ ವಿರೋಧ ಮಾಡಿಲ್ಲವೇ ? ಇದರ ಬಗ್ಗೆ ಬಿ.ಜೆ.ಪಿ., ಸಿ.ಪಿ.ಐ, ಸಿ.ಪಿ.ಎಂ, ಡಿ.ಎಂ.ಕೆ. ಕಾಂಗ್ರೆಸ್ ಪಾರ್ಟಿಯವರು ಈ ತೆರಿಗೆ ಪರಿಷ್ಕರಣ ಬಹಳ ಆರ್ಬಿಟ್ರರಿಯಾಗಿದೆ ಎಂದು ಹೇಳಿದ್ದಾರೆ. ನಾನು ಅವರಿಗೆ ಒಂದೇ ಒಂದು ವಿಷಯವನ್ನು ಹೇಳುತ್ತೇನೆ. ಇದನ್ನು ನೋಡಿಬಿಟ್ಟರೆ ಇದರಿಂದ ತಿಳಿಯುವುದೇನೆಂದರೆ ತೆರಿಗೆಯನ್ನು ಪರಿಷ್ಕರಿಸುವುದಕ್ಕೆ ಮುನ್ನ ಮಹಾನಗರ ಪಾಲಿಕೆಯಲ್ಲಾಗಲಿ ಅಥವಾ ಬೇರೆ ಯಾರ ಸಲಹೆಯನ್ನು, ಒಪ್ಪಿಗೆಯನ್ನೂ ಪಡೆಯಬೇಕಾಗಿಲ್ಲ ಎಂದು ಈ ರೀತಿ ಇದೆ. ಈ ಆರ್ಬಿಟ್ರರಿ ಪ್ರಾವಿಷನ್ ಇದ್ದರೂ ಕೂಡಾ ಇದನ್ನು ದುರುಪಯೋಗ ಮಾಡಿಕೊಂಡು ಸುಮಾರು ೫೦-೪೦ ಕೋಟಿ ರೂಪಾಯಿಯಷ್ಟು ಜಾಸ್ತಿ ವಸೂಲು ಮಾಡುತ್ತಿದ್ದಾರೆ. ಹುಚ್ಚು ಹುಚ್ಚಾಗಿ ಈ ರೀತಿ ಮಾಡುತ್ತಿದ್ದಾರೆ. Madness has a method. ಅದೂ ಕೂಡಾ ಈ ಕಾರ್ಪೊರೇಷನ್‌ಗೆ ಇಲ್ಲ. ಆದ್ದರಿಂದ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಅವರು ಬಹಳ ಹಠಮಾರಿತನ ಮಾಡುತ್ತಿದ್ದಾರೆ. ಪೋಲಿಯೋನೆ ಟಿಂಪೊರರಿ. ಸುಮ್ಮನೆ ಹಠಮಾರಿತನ ಬೇಡ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಶ್ರೀ ಕೃಷ್ಣನ್‌ರಪರೇ.....

ಶ್ರೀ ಎಂ. ಶ್ರೀನಿವಾಸ್.—ಅವರ ಪೋರ್ಟ್‌ಪೋಲಿಯೋ ಟಿಂಪೊರರಿ ಎಂದು ಪತಕ್ಕೆ ಈ ರೀತಿ ಮಾತನಾಡಬೇಕು.

(ಗೊಂದಲ)

ಅಧ್ಯಕ್ಷರು.—ಈಗ ರೆಕಾರ್ಡ್‌ಗೆ ಹೋಗುವುದಿಲ್ಲ. ಮಲ್ಲಪ್ಪನವರೇ ನೀವು ಕೂಡ್ರಿ.

ಶ್ರೀ ಎಂ.ಎಸ್. ಕೃಷ್ಣನ್.—ಅಧ್ಯಕ್ಷರೇ ಮೊದಲು ತಮಗೆ ವಂದನೆಗಳು. ಏಕೆಂದರೆ ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ. ಮಾನ್ಯ ಮಂತ್ರಿಗಳು ೨-೩ ವಿಷಯಗಳ ಮೇಲೆ ಬಹಳ ಸ್ಪಷ್ಟವಾಗಿ ಹೇಳಬೇಕಾಗಿದೆ. ಮೊದಲನೆಯದು ಏನು ಎಂದರೆ ಶೇಕಡ ೧೫ರಿಂದ ೨೦ರವರೆಗೂ ಜಾಸ್ತಿ ಮಾಡಿದ್ದೇವೆ, ಅಧಿಕಾರ ಇದೆ ಮಾಡಿದ್ದೇವೆ ಎಂದು ಅವರೇ ಒಪ್ಪಿಕೊಳ್ಳುತ್ತಾರೆ. ಶೇಕಡ ೫ರಷ್ಟು ಮಾಡಬಹುದು ಎನ್ನುವ ಅಭಿಪ್ರಾಯವನ್ನು ನನಗೆ ತಿಳಿದಮಟ್ಟಿಗೆ ಕಾರ್ಪೊರೇಷನ್‌ನ ಒಂದು ಸಮಿತಿಯೇನೋ ರಚನೆಯಾಗಿದ್ದು ಆ ಸಮಿತಿಯಲ್ಲಿ ಜನತಾ ಪಾರ್ಟಿಯವರು ಇದ್ದು ಶೇಕಡ ೫ರಷ್ಟು ಮಾಡಬಹುದು ಎಂದು ಇದೆ. ೫೦೦ ಪರ್ಸೆಂಟ್, ಸಾವಿರ ಪರ್ಸೆಂಟ್, ಸಾವಿರದ ಐದು ನೂರು ಪರ್ಸೆಂಟ್, ಎರಡು ಸಾವಿರ ಪರ್ಸೆಂಟ್ ಜಾಸ್ತಿ ಮಾಡಿದ್ದಾರೆ. ಯಾವ ಜನ ಒಪ್ಪಿಕೊಳ್ಳುತ್ತಾರೆ ? ಬಡವರ ಮೇಲೆ ಹಾಕಿದ್ದಾರೆ. ಈ ರೀತಿಯ ಶಿಕ್ಕಾಪಟ್ಟೆ ತೆರಿಗೆಯನ್ನು ಬಡವರ ಮೇಲೆ ಹಾಕಿದ್ದಾರೆ.

ಇಂಥಾಪರಿಗೆ ಕಡಿಮೆ ಮಾಡಿದ್ದಾರೆ. ಇಂತಹ ಪ್ರಕರಣಗಳು ಬೆಂಗಳೂರಿನಲ್ಲಿ ೧೦೮ ಇವೆ. ಹೀಗೆ ಇರಬೇಕಾದರೆ ಈ ತೆರಿಗೆಯನ್ನು ಹೆಚ್ಚು ಮಾಡುವ ಅವಶ್ಯಕತೆ ಇಲ್ಲ. ಇದರಿಂದ ಹೆಚ್ಚಿಗೆ ೬ ಕೋಟಿ ರೂಪಾಯಿ ಬರುತ್ತದೆ ಅಂತ ಅವರೇ ಒಪ್ಪಿಕೊಂಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಇವರು ಈ ೬ ಕೋಟಿ ರೂಪಾಯಿ ಬರುವುದಕ್ಕೆ ಈ ತೆರಿಗೆಯನ್ನು ಹಾಕಬೇಕಾಗಿರಲಿಲ್ಲ. ಹೇಗೆಂದರೆ ತಮಗೆಲ್ಲಾ ಗೊತ್ತಿರುವ ಹಾಗೆ ಈ ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್‌ನಿಂದ ಇವರಿಗೆ ಸುಮಾರು ೫ ಲಕ್ಷ ಮಾತ್ರ ಕೊಡುತ್ತಿದ್ದಾರೆ, ಇದನ್ನು ಜಾಸ್ತಿ ಮಾಡಿಕೊಡಿ ಎಂದು ಬಹಳ ದಿನದಿಂದಲೂ ಕೇಳುತ್ತಲೇ ಬಂದಿದ್ದಾರೆ ಹಾಗೆ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್‌ನಲ್ಲಾ ನಮಗೆ ಜಾಸ್ತಿ ಮಾಡಿಕೊಡಿ ಎಂದು ಮೊದಲಿನಿಂದಲೂ ಕೇಳುತ್ತಲೇ ಬಂದಿದ್ದಾರೆ. ಹಾಗೆ ಬೆಂಗಳೂರಿನಲ್ಲಿ ಎಲ್ಲಾ ಮುನಿಸಿಪಾಲಿಟಿಯ ಅಧ್ಯಕ್ಷರು ಕಾರ್ಯಕಾರಿ ಸಭೆಯಲ್ಲಿ

ಆ ಸಮ್ಮೇಳನದಲ್ಲಿ ಏನೂ ತೀರ್ಮಾನ ಮಾಡಲಿಲ್ಲ. ಇನ್ನು ಬೇರೆ ೨೫ ಪರ್ಸೆಂಟ್ ಬೇರೆ ಬೇರೆ ಮೂಲಗಳಿಂದ ಬರಬೇಕು, ಹಾಗೆಯೇ ಬೆಟ್ಟಿಂಗ್ ಟ್ಯಾಕ್ಸ್‌ನಿಂದಲೂ ಬರಬೇಕು, ಇದನ್ನು ಜಾಸ್ತಿ ಮಾಡಿಕೊಡಿ ಎಂದು ಅವರು ಬಹಳ ದಿನದಿಂದಲೂ ಕೇಳುತ್ತಲೇ ಬಂದಿದ್ದಾರೆ. ಅದನ್ನೂ ಕೊಡುತ್ತಾ ಇಲ್ಲ. ಮಾನ್ಯ ಹೆಚ್. ಡಿ. ದೇವೇಗೌಡರು ಬಹಳ ಅಭಿಮಾನ ಇಟ್ಟು ಬೊನ್ನೆ ಹುಬ್ಬಳ್ಳಿಯಲ್ಲಿ ಇದನ್ನೆಲ್ಲಾ ವಸೂಲ್ಮಾಡಿ ಎಂದು ಹೇಳಿದರು.

ಅಧ್ಯಕ್ಷರು.—ತಾವು ಭಾಷಣ ಮಾಡುವುದು ಬೇಡ. ಬರೇ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎಂ.ಎಸ್. ಕೃಷ್ಣನ್.—ನಾನು ಹೇಳುವುದು ಇಷ್ಟೆ. ಈಗ ತಾವು ತೆರಿಗೆಯನ್ನು ಏನು ಹಾಕುತ್ತಿದ್ದೀರಿ ಅದನ್ನು ಕೈಬಿಡಬೇಕು ಎಂದು ಹೇಳುತ್ತೇನೆ. ಇಲ್ಲವೇ ಈ ಸದನದ ಒಂದು ಸಮಿತಿ ಮಾಡಿ, ಇದನ್ನು ತಾವು ಮತ್ತೆ ಪುನಃ ವಿಮರ್ಶೆ ಮಾಡಬೇಕು ಎಂದು ಹೇಳುತ್ತೇನೆ. ಈ ತೆರಿಗೆಯನ್ನು ಹೆಚ್ಚು ಹಾಕಿರುವುದರ ಬಗ್ಗೆ ನಿಮ್ಮ ಪಾರ್ಟಿಯವರೇ ವಿರೋಧವಾಗಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ತೆರಿಗೆಯನ್ನು ಜಾಸ್ತಿ ಮಾಡಿದ್ದಾರೆ ಎಂದು ಹೇಳಿದ್ದಾರೆ. ನಾವು ಜಾಸ್ತಿ ಮಾಡಿಲ್ಲ, ತೆರಿಗೆಯ ಬಗ್ಗೆ ಪರಿಷ್ಕರಣ ಮಾಡಿದ್ದೇವೆ. ರಿವಿಷನ್ ಆಫ್ ಟ್ಯಾಕ್ಸ್ ನಡೆದಿರುವುದು.

ಶ್ರೀ ಎಂ.ಎಸ್. ಕೃಷ್ಣನ್.—ನಿಮ್ಮ ಮಾತನ್ನೆಲ್ಲಾ ಕೇಳಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಸದಸ್ಯರು ಹೇಳಿದ ಮಾತನ್ನೆಲ್ಲಾ ನಾನು ಹೇಗೆ ಕೇಳಿ ಕೊಂಡಿದ್ದೆನೋ ಹಾಗೆಯೇ ತಾವೂ ಸಹ ನನ್ನ ಮಾತನ್ನು ಕೇಳಬೇಕು. ಹಾಗೆಯೇ ನೀವೂ ಹೇಳಿದ ಹಾಗೆ ನಾನೂ ಕೂಡ ನಿಮ್ಮ ಮಾತು ಕೇಳಿದ್ದೇನೆ ಅಂತ ಹೇಳಬಹುದಲ್ಲಾ. ಅದು ಬೇಡ. ತಮಗೆ ಹೇಳಬೇಕಾದರೆ ಈಗ ತೆರಿಗೆಯನ್ನು ಜಾಸ್ತಿ ಮಾಡಿಲ್ಲ ಪರಿಷ್ಕರಣ ಕೆಲಸ ನಡೆದಿದೆ. ಕಾನೂನು ಪುಕಾರ ಮಾನ್ಯ ಆರ್. ವೆಂಕಟರಾಮಯ್ಯನವರು ಹೇಳಿದರು. ಆಯುಕ್ತರು ಇದನ್ನು ಮಾಡಿರ ಬಹುದು ಎಂದು. ಆಯುಕ್ತರಿಗೆ ನಾವು ಅಧಿಕಾರ ಕೊಟ್ಟಿದ್ದೇವೆ. ಈ ತೆರಿಗೆಯ ಪರಿಷ್ಕರಣದ ಬಗ್ಗೆ ಕೆಲವರು ಇದು ಕಾನೂನಿಗೆ ವಿರುದ್ಧ ಎಂದು ಕೋರ್ಟಿಗೆ ಹೋಗಿ ಅಪೀಲು ಹಾಕಿದರು, ರಿಟ್ ಹಾಕಿ ದರು. ಈಗ ಅವೆಲ್ಲಾ ಮುಗಿದು ಹೋಗಿದೆ. ಈಗ ಇವರ ಬಗ್ಗೆ ತಕರಾರು ಬಂದಿರತಕ್ಕಂಥಾದ್ದು ಏನು ಎಂದರೆ ಇದನ್ನು ಅನ್‌ಸ್ಯೆಂಟಿಫಿಕ್ ಎಂದು ಹೇಳಿದ್ದಾರೆ.

SRI M.S. KRISHNAN.—Not at all necessary.

SRI A. LAKSHMISAGAR.—It is your opinion. ಈಗ ಒಟ್ಟು ೫ ಕಾರ್ಪೋರೇಶನ್ಸ್ ಇವೆ, ಬೆಂಗಳೂರು ಕಾರ್ಪೋರೇಶನ್ ಸೇರಿದರೆ ೬ ಆಗುತ್ತದೆ. ಎಲ್ಲಾ ಕಡೆಯೂ ಇದರ ಪರಿಷ್ಕರಣದ ಕಾರ್ಯ ನಡೆದಿದೆ. ಇವರ ಜೊತೆಗೆ ೭೦ ಸಿ.ಎಂ.ಸಿ. ಸಲ್ಲೂ ಈ ಪರಿಷ್ಕರಣದ ಕಾರ್ಯ ಈ ವರ್ಷ ನಡೆದಿದೆ ಎಲ್ಲ ಕಡೆಯೂ ಕೂಡ ಈ ಪರಿಷ್ಕರಣದ ಬಗ್ಗೆ ಟೀಕೆಗಳು ಬಂದಿವೆ. ಏನೆಂದರೆ ಇದು ಅನ್‌ಸೈಂಟಿಫಿಕ್, ಅವೈಜ್ಞಾನಿಕ ಎಂದು ಬಂದಿದೆ. ಈ ಪರಿಷ್ಕರಣ ನಡೆದುದರ ಬಗ್ಗೆ ಆದು ಹೆಚ್ಚಾಗಿರಬಹುದು, ಇಲ್ಲವೇ ಕಡಿಮೆಯಾಗಿರಬಹುದು. ಬರೇ ಜಾಸ್ತಿ ಮಾಡಬೇಕು ಅಂತ ಏನೂ ಇಲ್ಲ. ಆದರೆ ಈ ಪರಿಷ್ಕರಣದಲ್ಲಿ ಯಾರ್ಯಾರಿಗೆ ಏನೇನು ತೊಂದರೆ ಯಾಯಿತು ಅನ್ನುವುದನ್ನು ಈಗ ತಾವು ನನ್ನ ಗಮನಕ್ಕೆ ತಂದಿದ್ದೀರಿ. ಯಾವುದೇ ಆಗಲಿ ಈ ರೀತಿ ಅಸೆಸ್ ಮಾಡಿದಾಗ ಕೆಲವರಿಗೆ ತೊಂದರೆಯಾಗುತ್ತದೆ. ಅನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಪಾಗ ಅಸೆಸ್ ಮಾಡುವಂಥಾ ಸೇಲ್ಸ್ ಟ್ಯಾಕ್ಸ್ ಬಗ್ಗೆ ಯಾಗಲಿ ಟರ್ನ್‌ಓವರ್ ಟ್ಯಾಕ್ಸ್ ಬಗ್ಗೆಯಾಗಲಿ ಇನ್‌ಕಮ್‌ಟ್ಯಾಕ್ಸ್ ಬಗ್ಗೆ ಯಾಗಲಿ ತೆಗೆದುಕೊಂಡರೆ ಈ ಬಗ್ಗೆ ಅಸೆಸ್ಸ್ ಮಾಡತಕ್ಕಂಥಾ ಅಧಿಕಾರವನ್ನು ಆಯಾಯ ಅಧಿಕಾರಿಗಳಿಗೆ ಕೊಟ್ಟಿರುತ್ತೇವೆ. ಅಸೆಸ್‌ಮೆಂಟ್ ಆದಮೇಲೆ ಎಲ್ಲ ಕಡೆಯೂ ಇಂತಹ ತಕರಾರುಗಳು ಬರುತ್ತವೆ. ತಮ್ಮ ಗಮನಕ್ಕೆ ತರಬೇಕಾದರೆ ಇದುವರೆಗೂ ಯಾವ ತಕರಾರೂ ಇಲ್ಲದೆ ಇಂತಹ ಅಸೆಸ್‌ಮೆಂಟ್ ನಡೆದಿಲ್ಲ ಆದರೆ ಅದಕ್ಕೆ ಪರಿಹಾರ ಉಂಟು. ಇದಕ್ಕೆ ಮೂರು ಪರಿಹಾರ ಮಾರ್ಗಗಳು ಇವೆ. ಮೊದಲನೆಯದು ಈ ಪರಿಷ್ಕರಣ ವಿರುದ್ಧ ಈ ರೀತಿ ಇದೆ ಎಂದು ಕಾರ್ಪೋರೇಷನ್ ಕಮಿಷನರಿಗೆ ಅರ್ಜಿ ಕೊಡಬೇಕು. ಈ ಬಗ್ಗೆ ಆತರ ತೀರ್ಮಾನವಾದ ಮೇಲೆ ಬೇಕಾದರೆ ಟ್ರಾಫ್ಯೂನಲ್ ಕಮಿಟಿಗೆ ಹೋಗ ಬಹುದು. ಅನಂತರ ಬೇಕಾದರೆ ಅವಶ್ಯ ತೀರ್ಮಾನದ ಮೇಲೆ ಹೈಕೋರ್ಟಿಗೂ ಹೋಗಬಹುದು. ಆದರೆ ಇದರಲ್ಲಿ ಮೊದಲನೆಯದು ಏನಿತ್ತು ಎರಡನೆಯದಕ್ಕೆ ತೊಂದರೆಯಾಗಿದ್ದವರು ಅವರಿಗೆ ಬರೇ ಅರ್ಜಿ ಹಾಕಿದರೆ ಸಾಕು. ತೀರ್ಮಾನ ಮಾಡಿಕೊಳ್ಳಬಹುದು. ಅದಕ್ಕೇನೂ ಹೆಚ್ಚು ಖರ್ಚಾಗುವುದಿಲ್ಲ.

ತಮ್ಮ ಗಮನಕ್ಕೆ ತರಬೇಕಾದರೆ ಈ ಪರಿಷ್ಕರಣದ ಕಾರ್ಯ ಬೆಂಗಳೂರಿನಲ್ಲಿ ೨೦ ವರ್ಷಗಳ ಹಿಂದೆ ನಡೆದಿತ್ತು. ಇದುವರೆಗೂ ನಡೆದಿರಲಿಲ್ಲ. ಈಗ ಪರಿಷ್ಕರಣ ಕಾರ್ಯ ನಡೆದಿದೆ. ಆವಾಗ ಆದಷ್ಟು ಕಡಿಮೆ ಇತ್ತು. ನಮ್ಮ ರಾಜ್ಯದ ಇತರ ಕಾರ್ಪೊರೇಷನ್‌ಗಳಲ್ಲಿ ಬೆಂಗಳೂರು ನಗರ ಕಾರ್ಪೊರೇಷನ್‌ಗಿಂತ ಹೆಚ್ಚು ಅಂದರೆ ಶೇಕಡಾ ೧೫ ಕ್ಕಿಂತ ಜಾಸ್ತಿ ಪ್ರಮಾಣದಲ್ಲಿ ತೆರಿಗೆ ಇದೆ. ಇದನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕು. ಈ ಬಗ್ಗೆ ನಾನು ಹೆಚ್ಚು ಅವಲಂಬಿಸುವುದಕ್ಕೆ ಹೋಗುವುದಿಲ್ಲ. ಪ್ರತಿ ಸಲ ತೆರಿಗೆ ಪರಿಷ್ಕರಣ ನಡೆದಾಗಲೂ ಇದೇರೀತಿ ನಡೆಯುತ್ತದೆ. ಈಗ ಬೆಂಗಳೂರಿನಲ್ಲಿ ಅಸೆಸ್‌ಮೆಂಟ್ಸ್ ಆಗಿರುವ ಮನೆಗಳ ಸಂಖ್ಯೆ ೧ ಲಕ್ಷದ ೯೦ ಸಾವಿರ. ಈ ಬಗ್ಗೆ ಬಂದಿರುವ ಅಪೀಲ್‌ಗಳ ಸಂಖ್ಯೆ ೨೯,೫೧೦. ಅಂದರೆ ಶೇಕಡಾ ೧೫.೫ ರಷ್ಟು. ಅದೇ ಹುಬ್ಬಳ್ಳಿ-ಧಾರವಾಡದಲ್ಲಿ ಅಸೆಸ್‌ಮೆಂಟ್ಸ್ ಆಗಿರುವ ಮನೆಗಳ ಸಂಖ್ಯೆ ೮೬,೨೧೭. ಈ ಬಗ್ಗೆ ಬಂದಿರುವ ಅಪೀಲ್‌ಗಳ ಸಂಖ್ಯೆ ೨೨,೧೧೨. ಅಂದರೆ ಶೇಕಡಾ ೨೬ ಪರ್ಸೆಂಟ್ ಆಯಿತು. ಇಲ್ಲಿ ರಿವೈಸ್ಡ್ ಆಗಿದ್ದು ೧೯೭೫ ರಲ್ಲಿ. ಮೈಸೂರು ಸಿಟಿ ಕಾರ್ಪೊರೇಷನ್‌ನಲ್ಲಿ ಅಸೆಸ್‌ಮೆಂಟ್ಸ್ ಆಗಿರುವ ಮನೆಗಳ ಸಂಖ್ಯೆ ೬೦,೩೪೫. ಅಬ್ಜೆಕ್ಷನ್ ಬಂದಿರುವುದು ೧೭,೦೫೦. ಅಂದರೆ ೨೮ ಪರ್ಸೆಂಟ್ ಆಯಿತು. ಇಲ್ಲಿ ರಿವೈಸ್ ಆಗಿದ್ದು ೧೯೭೨ ರಲ್ಲಿ. ಮತ್ತೆ ಮಂಗಳೂರು ಸಿಟಿಯಲ್ಲಿ ಅಸೆಸ್‌ಮೆಂಟ್ಸ್ ಆಗಿರುವ ಮನೆಗಳ ಸಂಖ್ಯೆ ೩೬,೭೮೮. ಇವುಗಳ ಪೈಕಿ ತಕರಾರು ಬಂದಿದ್ದು ೪೨೫೩. ಅಂದರೆ ೧೨ ಪರ್ಸೆಂಟ್ ಆಯಿತು. ಇಲ್ಲಿ ರಿವೈಸ್ ಆಗಿದ್ದು ೧೯೮೨ ರಲ್ಲಿ. ಬೆಳಗಾಂ ಸಿಟಿಯಲ್ಲಿ ಅಸೆಸ್‌ಮೆಂಟ್ ಆದ ಮನೆಗಳ ಸಂಖ್ಯೆ ೩೧,೨೪೦. ಇದರ ಪೈಕಿ ತಕರಾರು ಬಂದಿದ್ದು ೧೮೬೫ ಮನೆಗಳ ಮಾಲೀಕರಿಂದ. ಇಲ್ಲಿ ತೆರಿಗೆ ಪರಿಷ್ಕರಣ ಆಗಿದ್ದು ೧೯೭೫ ರಲ್ಲಿ. ಇದು ಶೇಕಡಾ ೬೦ ಪರ್ಸೆಂಟ್ ಆಯಿತು. ಗುಲ್ಬರ್ಗ ಸಿಟಿಯಲ್ಲಿ ತೆರಿಗೆ ಪರಿಷ್ಕರಣ ಆಗಿದ್ದು ೧೯೮೪ ರಲ್ಲಿ. ೧೫,೬೪೧ ಮನೆಗಳ ಅಸೆಸ್‌ಮೆಂಟ್ ಆಯಿತು. ಇದರಲ್ಲಿ ತಕರಾರು ಬಂದಿದ್ದು ೧೦ ಸಾವಿರದವರೆಗೆ. ಅಂದರೆ ಶೇಕಡಾ ೬೭ ರಷ್ಟು. ಆದ್ದರಿಂದ ಈ ರೀತಿ ಎಲ್ಲ ಕಡೆ ನಡೆದಿದೆ. ಈ ಬಗ್ಗೆ ನನ್ನ ಮನವಿ ಅದರೂ ಇಷ್ಟೆ. ಈ ತೆರಿಗೆ ಪರಿಷ್ಕರಣದಿಂದ ೬ ಕೋಟಿ ಇಲ್ಲವೇ ಆರೂವರೆ ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಆದಾಯ ಬರಬಹುದು. ೫೦-೬೦ ಕೋಟಿ ರೂಪಾಯಿಗಳಷ್ಟು ಆದಾಯ ಬರುತ್ತದೆಂಬುದು ಬರೀ ಕಾಲ್ಪನಿಕ. ಈ ಬಗ್ಗೆ ಈ ಸದನದ ಸಮಿತಿಯನ್ನು ನೇಮಕ ಮಾಡುವ ಅಗತ್ಯವಿಲ್ಲ. ಇದಕ್ಕೆ ಯಾವ ಸಮಿತಿಯ ಅಗತ್ಯವೂ ಇಲ್ಲ. ತೆರಿಗೆ ಪರಿಷ್ಕರಣ ಮಾಡಿದ ಎಲ್ಲ ಸಮಯದಲ್ಲಿಯೂ ಇದೇ ರೀತಿ ತಕರಾರುಗಳು ಬಂದಿವೆ. ೧೯೭೭ನೇ ಇಸವಿಯಲ್ಲಿ ಬೆಂಗಳೂರು ನಗರದಲ್ಲಿ ಒಂದು ಲಕ್ಷ ಮನೆಗಳ ತೆರಿಗೆ ಪರಿಷ್ಕರಣ ನಡೆದಾಗ ೨೦ ಸಾವಿರ ತಕರಾರುಗಳು ಬಂದಿದ್ದವು. ಈಗ ಇದಕ್ಕಿಂತ ಜಾಸ್ತಿ ಬರುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ ನಾನು ಎಲ್ಲರಲ್ಲಿಯೂ ಮನವಿ ಮಾಡಿಕೊಳ್ಳುವುದೇನೆಂದರೆ, ಇದನ್ನು ಯಾರೂ ರಾಜಕೀಯಕ್ಕಾಗಿ ಎಳೆಯುವುದು ಬೇಡ. ಈಗ ಬೆಂಗಳೂರು ನಗರಪಾಲಿಕೆಯ ಹಾಗೂ ಇನ್ನಿತರ ನಗರ ಪಾಲಿಕೆಗಳ ಹಣಕಾಸಿನ ಪರಿಸ್ಥಿತಿ ಉತ್ತಮವಾಗಿಲ್ಲ ಇಲ್ಲಿ ಕೆಲಸ ಮಾಡುವವರ ಸಂಬಳ ಪ್ರತಿ ವರ್ಷವೂ ಜಾಸ್ತಿಯಾಗಿರುತ್ತದೆ. ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ತಮ್ಮ ಉದ್ಯೋಗಿಗಳ ಸಂಬಳವನ್ನು ಜಾಸ್ತಿ ಮಾಡಿದಾಗಲೆಲ್ಲಾ ಈ ಸ್ಥಳೀಯ ಸಂಸ್ಥೆಗಳೂ ಸಹ ತಮ್ಮ ಉದ್ಯೋಗಿಗಳ ಸಂಬಳವನ್ನು ಜಾಸ್ತಿ ಮಾಡಬೇಕಾಗುತ್ತದೆ. ಈಗ ಇವುಗಳಿಗೆ ಸಂಬಳ ಕೊಡುವುದಕ್ಕೂ ಹಣವಿಲ್ಲದ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಬೆಂಗಳೂರು ನಗರಪಾಲಿಕೆ ಕಾವೇರಿ ಮೂರನೇ ಹಂತದ ಕೆಲಸಕ್ಕೆ ಹಣ ಕೊಡಬೇಕಾಗಿದೆ. ಇಲ್ಲಿನ ನೌಕರರ ನಿವೃತ್ತಿ ವಯಸ್ಸನ್ನು ೫೫ ರಿಂದ ೫೮ಕ್ಕೆ ಹೆಚ್ಚಿರುವ ಕಾರಣದಿಂದ ೨-೩ ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಖರ್ಚು ಬಂದಿದೆ. ಇದರ ಜೊತೆಗೆ ಬೇರೆ ಬೇರೆ ಕಟ್ಟಡಗಳ ಕೆಲಸಗಳನ್ನು, ಅಭಿವೃದ್ಧಿ ಕೆಲಸಗಳನ್ನು ಮಾಡಿಸಲು ಹಣ ಖರ್ಚು ಮಾಡಬೇಕಾಗಿದೆ. ಇಲ್ಲಿ ತೆರಿಗೆ ಪರಿಷ್ಕರಣ ಆಗಿದೆಯೇ ಹೊರತು ತೆರಿಗೆ ಮಟ್ಟ ಜಾಸ್ತಿ ಆಗಿಲ್ಲ. There is no increase in the quantum of assessment. Revision only is taking place which is lowest in the country. ಆದ್ದರಿಂದ ನಾನು ಎಲ್ಲರಲ್ಲಿಯೂ ಮನವಿ ಮಾಡಿಕೊಳ್ಳುವುದಿಷ್ಟೆ, ಈ ತೆರಿಗೆ ಪರಿಷ್ಕರಣಕ್ಕೆ ಯಾರೂ ಅಡ್ಡಿ ಬರಬಾರದು. ವಿನಾಕಾರಣ ತಕರಾರು ಇದ್ದರೆ, ಅದನ್ನು ತೀರ್ಮಾನ ಮಾಡುವುದಕ್ಕೆ ಅತ್ಯಂತ ಸುಲಭವಾದ ಮತ್ತು ಖರ್ಚಿಲ್ಲದ ಮಾರ್ಗ ಇದೆ. ಈ ಸ್ಥಳೀಯ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಬೇಕಾಗಿದೆ. ಇವುಗಳ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ಮಾಡಿರುವಂತಹ ಉಪಾಯ ಇದು. ಈ ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರವೇ ಹಣ ಕೊಡುವುದಕ್ಕಾಗುವುದಿಲ್ಲ. ಇಲ್ಲಿ ಇಷ್ಟರತ್ತು ವರ್ಷಗಳ ನಂತರ ತೆರಿಗೆ ಪರಿಷ್ಕರಣ ನಡೆಯುತ್ತಿದೆ. ಇದಕ್ಕೆ ಕಾರಣವಿಂದರೆ ಇಲ್ಲಿ ಅಸೆಸ್ ಆಗದ ಮನೆಗಳು ಅಂದರೆ ಅಸೆಸ್ಡ್ ಆಗಿರದ ಮನೆಗಳಿಗೆ ಸರಿಯಾದ ತೆರಿಗೆಯನ್ನು ವಿಧಿಸಿರುವುದರಿಂದ ತೆರಿಗೆ ಜಾಸ್ತಿ ಆದಂತೆ ಕಾಣುತ್ತಿದೆ. ಕೆಲವು ಕಡೆಗಳಲ್ಲಿ ತಪ್ಪುಗಳಾಗಿವೆ. ಅದನ್ನು ಪರಿಹಾರ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಇನ್ನು

ಎಲ್ಲರಲ್ಲೂ ವಿನಯದಿಂದ ಮನವಿಮಾಡಿಕೊಳ್ಳುತ್ತೇನೆ, ಇದಕ್ಕೆ ಎಲ್ಲರೂ ಬೆಂಬಲ ಕೊಡಬೇಕು, ಸಂಪನ್ಮೂಲ ಹೆಚ್ಚಿಸುವುದಕ್ಕೆ ಸಹಾಯ ಮಾಡಿರಿ ಎಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ತೆರಿಗೆ ಜಾಸ್ತಿ ಮಾಡಿರುವುದರ ಬಗ್ಗೆ ವಿರೋಧ ಮಾಡುತ್ತಾ ಇಲ್ಲ.

ಅಧ್ಯಕ್ಷರು.—ತಾವು ಭಾಷಣ ಮಾಡಿದಿರಿ, ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈ ವಿಷಯ ನಿನ್ನೆ ಕೌನ್ಸಿಲ್‌ನಲ್ಲೂ ನಡೆದಿದೆ. ಇವತ್ತಿನ ಪೇಪರಿನಲ್ಲಿ ತುಂಬಾ ಅದೇ ಇದೆ,

ಶ್ರೀ ಬಿ. ಎಸ್. ಯಡಿಯೂರಪ್ಪ.—ಬಿ.ಜೆ.ಪಿ. ಕಾರ್ಪೊರೇಟರ್ಸ್ ಅಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಾ ಇದ್ದಾರೆ, ಅನಿರ್ಧಿಷ್ಟಕಾಲ ಧರಣಿ ಸತ್ಯಾಗ್ರಹ ಮಾಡುತ್ತಾ ಇದ್ದಾರೆ ಅವರನ್ನು ವಾಪಸ್ಸು ತೆಗೆದುಕೊಳ್ಳುವ ಬಗ್ಗೆ ವಿನಂತಿ ಮಾಡಿದ್ದಾರೆ, ಅದರ ಬಗ್ಗೆ ನನ್ನ ಪ್ರಶ್ನೆ ಇದೆ.

ಅಧ್ಯಕ್ಷರು.—ನೀವು ಏನೇ ಮಾತನಾಡಿದರೂ ರಿಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಂತ್ರಿಗಳು ಉತ್ತರ ಕೊಟ್ಟಮೇಲೆ ನಾವು ಕ್ಲಾರಿಫಿಕೇಷನ್ ಕೇಳಬೇಡವೆ. ತಾವೇ ನಮ್ಮ ಸಹಾಯಕ್ಕೆ ಬರಬೇಕು.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಮುಖ್ಯ ಮಂತ್ರಿಗಳು ಪುನರ್‌ಪರಿಶೀಲನೆ ಮಾಡೋಣ ಎಂದು ಹೇಳಿದ್ದಾರೆ. ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಹಠ ಮಾಡಬಾರದು, ಹಠ ಮಾಡುವುದು ಸರಿಯಲ್ಲ. ದಯವಿಟ್ಟು ಇದರ ಬಗ್ಗೆ ಸ್ವಲ್ಪ ತೀವ್ರವಾಗಿ ಆಲೋಚನೆ ಮಾಡಬೇಕಾಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಜೆಂಗಳೂರು ನಗರದ ಜನತೆಗೆ ಜನತಾ ಸರ್ಕಾರದವರು ಮೋಸ ಮಾಡಿದ್ದಾರೆ. ವಿನಾಶಕಾಲೇ ವಿಪರೀತ ಬುದ್ಧಿ ಎಂಬಂತಾಗಿದೆ. ಅನೇಕ ಜನತಾಪಕ್ಷದ ಸದಸ್ಯರು, ಮಾನ್ಯ ನಾರಾಯಣರಾವ್‌ರವರು ತಪ್ಪಾಗಿದೆ ಸರಿಪಡಿಸುತ್ತೇವೆಂದು ಹೇಳಿದ್ದಾರೆ. ನಾನು ನಿಮ್ಮ ಮೂಲಕ ವಿನಂತಿಮಾಡುವುದೇನೆಂದರೆ, ಸದನದ ಒಂದು ಸಮಿತಿಮಾಡಿ ಸತ್ಯಾಸತ್ಯತೆಯನ್ನು ಪರಿಶೀಲನೆಮಾಡಿ. ೧೫ ಕೋಟಿರೂಪಾಯಿ ವಸೂಲು ಮಾಡುತ್ತಿದ್ದಾರೆ, ಅದರ ಡಬಲ್ ಮಾಡಿದರೆ ೩೦ ಕೋಟಿಯಾಗುತ್ತದೆ, ಬೇಡ ಎಂದು ಹೇಳುವುದಿಲ್ಲ.

ಅಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಬೆಂಗಳೂರು ನಗರದ ಜನತೆಗೆ ಜನತಾ ಸರ್ಕಾರ ಮೋಸ ಮಾಡಿದೆ. ಇದನ್ನು ಪ್ರತಿಭಟಿಸಿ ನಾವು ವಾಕೌಟ್ ಮಾಡುತ್ತಾ ಇದ್ದೇವೆ.

(ಭಾರತೀಯ ಜನತಾ ಪಕ್ಷ, ಕಮ್ಯುನಿಸ್ಟ್ ಪಕ್ಷ ಮತ್ತು ಮಾರ್ಕಿಸಿಸ್ಟ್ ಕಮ್ಯುನಿಸ್ಟ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಕರಿಯ ಆರೋಗ್ಯ ಸಹಾಯಕರ ಬೇಡಿಕೆಗಳ ಅನಿರ್ಧಿಷ್ಟ ಉಪವಾಸದ ಬಗ್ಗೆ

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ದಿನಾಂಕ ೫ನೇ ಜನವರಿ ೧೯೮೭ ರಿಂದ ಕರಿಯ ಆರೋಗ್ಯ ಸಹಾಯಕರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಅನಿರ್ಧಿಷ್ಟಕಾಲ ಉಪವಾಸ ಮಾಡುತ್ತಿರುವ ಬಗ್ಗೆ ಮಾನ್ಯ ಆರೋಗ್ಯ ಮತ್ತು ಅಬಕಾರಿ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ದಿನಾಂಕ ೫ನೇ ಜನವರಿ ೧೯೮೭ ರಿಂದ ಕರಿಯ ಆರೋಗ್ಯ ಸಹಾಯಕರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಸರದಿ ಉಪವಾಸವನ್ನು ಮಾಡುತ್ತಿರುವುದು ಸರಿಯಷ್ಟೆ. ಈ ವಿಷಯಗಳಿಗೆ ಸಂಬಂಧಿಸಿದಂತೆ ಮತ್ತು ಬೇಡಿಕೆಗಳ ಬಗ್ಗೆ ದಿನಾಂಕ ೧೬ನೇ ಜನವರಿ ೧೯೮೭ ರಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವಾಲಯದಲ್ಲಿ ಕಾರ್ಯದರ್ಶಿಯವರ ಸಮ್ಮುಖದಲ್ಲಿ ಈ ಕಾರ್ಯಕರ್ತರ ಸಂಘದ ಪದಾಧಿಕಾರಿಗಳ ಜೊತೆ ಬೇಡಿಕೆಗಳ ಬಗ್ಗೆ ಸಭೆ ನಡೆದ ನಂತರ ಕರಿಯ ಆರೋಗ್ಯ ಸಹಾಯಕರ ಸಂಘವು ದಿನಾಂಕ ೧೯ನೇ ಜನವರಿ ೧೯೮೭ ರಂದು ಸತ್ಯಾಗ್ರಹವನ್ನು ನಿಲ್ಲಿಸಿರುತ್ತದೆ. ಆದರ ಬೇಡಿಕೆಗಳು ಪರಿಶೀಲನೆಯಲ್ಲಿವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಅವರ ಗೌರವಧನ ೧೭ ಬೇಡಿಕೆಗಳು ಇವೆ. ಬೇಡಿಕೆಗಳು ಸರ್ಕಾರದ ಪರಿಶೀಲನೆಯಲ್ಲಿವೆ ಎನ್ನುವುದು ಸರಿ. ಸದರಿ ಬೇಡಿಕೆಗಳನ್ನು ಈಡೇರಿಸುವ ವಿಚಾರದಲ್ಲಿ ಕಾಲಮಿತಿಯನ್ನು ಗೊತ್ತುಪಡಿಸುವುದಕ್ಕೆ ಸಾಧ್ಯವೆ ಎಂದು ಕೇಳುತ್ತೇನೆ.